ಸಮಯದಲ್ಲಿ ಕೂಡ ಎಲ್ಲ ಬಗೆಯ ವಿಚಾರಗಳಿಂದಲೂ ಮನಸ್ಸನ್ನು ಬೇರೆ ಮಾಡಿ ಇಷ್ಟವಸ್ತು ಅಥವಾ ಧ್ಯೇಯವಸ್ತುವಿನ ಮೇಲೆಯೇ ಅದನ್ನು ಕೇಂದ್ರೀಕರಿಸಬೇಕು.

ಭಗವದ್ಗೀತೆಯಲ್ಲಿ ಹೀಗೆ ಹೇಳಿದೆ :

**ಶನೈಃಶನೈರುಪರಮೇದ್ಬುದ್ಧ್ಯಾ ಧೃತಿಗೃಹೀತಯಾ । ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿಂತಯೇತ್ ॥**

**ಯತೋ ಯತೋ ನಿಶ್ಚರತಿ ಮನಶ್ಚಂಚಲಮಸ್ಥಿರಮ್। ತತಸ್ತತೋ ನಿಯಮ್ಯೈತದಾತ್ಮನ್ಯೇವ ವಶಂ ನಯೇತ್** ॥ (೬:೨೫–೨೬)

**ಶನೈಃ ಶನೈಃ** ಅಂದರೆ, 'ಬಹುನಿಧಾನವಾಗಿ' ಎಂದು ಇಲ್ಲಿ ಹೇಳಿದೆ. ಕಾರಣ ಇಲ್ಲಿ ನಾವು ಪ್ರಯತ್ನ ಪಡುತ್ತಿರುವುದು ಸಮಾಧಿಯ ಅನುಭವಕ್ಕಾಗಿ. ಯಾವುದರ ಅನುಭವ(ಸಮಾಧಿ) ಆಗಬೇಕೋ ಅದಕ್ಕಾಗಿ ಮನಸ್ಸನ್ನು ಶಾಂತಗೊಳಿಸಬೇಕು. ಮನಸ್ಸಿನ ಶಾಂತತೆಯಿಂದಲೇ ಧ್ಯಾನ ಸಾಧ್ಯ. ಕ್ರಮೇಣ ಮನಸ್ಸು ಶಾಂತವಾಗಿ ಅದರ ಪ್ರಭಾವವು ನಮ್ಮ ದೈನಂದಿನ ಜೀವನದ ಮೇಲೆಯೂ ಬೀಳುತ್ತದೆ. ಧ್ಯಾನ ಮಾಡುವವನ ಸ್ವಭಾವದಲ್ಲಿ ಮೃದುತ್ವ ಬರುತ್ತದೆ. ಚಲನವಲನಗಳಲ್ಲಿ ಕಾಂತಿ ಎದ್ದು ಕಾಣುತ್ತದೆ. ಗಡಿಬಿಡಿ ಮಾಡಿದರೆ ಏನೂ ಆಗದು. ಭಜನಾವೃಂದದವರು ಮೃದಂಗ, ಕರತಾಳ, ಜಾಗಟೆಗಳನ್ನು ಬಡಿದು ಕುಣಿದು ಕುಪ್ಪಳಿಸುತ್ತಾರೆ. ಧ್ಯಾನಿಗೆ ಇವೆಲ್ಲ ರುಚಿಸದು. ಶ್ರೀರಾಮಕೃಷ್ಣರ ಜೀವನದಲ್ಲಿ ಮೇಲಿನೆರಡೂ ಮೇಳೈಸಿದ್ದವು. ಪರಮಹಂಸರು ಸಂಕೀರ್ತನೆಯ ಸಮಯದಲ್ಲಿ ಅದ್ಭುತವಾಗಿ ನರ್ತಿಸುತ್ತಿದ್ದರು. ಅವರ ಜೊತೆಗಾರರು ಮಾತ್ರವಲ್ಲದೇ ಅಕ್ಕಪಕ್ಕದಲ್ಲಿದ್ದವರು ಕೂಡ ಅವರೊಡನೆ ಕುಣಿದು ಕುಣಿದು ಬೆವತು ಹೋಗುತ್ತಿದ್ದರು. ಹಾಗೆಯೇ ಅವರಲ್ಲಿ ಶಾಂತಭಾವ ಇದ್ದಾಗ ಆಗ ಅದೆಲ್ಲ ಅವರಿಗೆ ಹಿಡಿಸುತ್ತಿರಲಿಲ್ಲ. ಹೀಗೆ ಶ್ರೀರಾಮಕೃಷ್ಣರು ಎಲ್ಲಾ ಭಾವಗಳಲ್ಲಿಯೂ ಅವುಗಳ ಪರಾಕಾಷ್ಠೆಗೆ ಏರುತ್ತಿದ್ದರು; ಅದನ್ನು ಬೇರೆಯವರಿಗೆ ತೋರಿಸಿಕೊಡುತ್ತಿದ್ದರು ಕೂಡ.

**ಪ್ರಶ್ನೆ : ನಿದ್ದೆ ಮಾಡುವುದಕ್ಕೇ ಯೋಗದಲ್ಲಿ 'ಲಯ' ಎಂದು ಹೇಳಿರುವುದೇ?**

**ಸ್ವಾಮೀಜಿ :** ಹೌದು. ಯೋಗದಲ್ಲಿ ಬರುವ ವಿಘ್ನಗಳಲ್ಲಿ 'ಲಯ' ಕೂಡ ಒಂದು. ಮಾಂಡೂಕ್ಯಕಾರಿಕೆಯಲ್ಲಿ ಇದರ ಪ್ರಸ್ತಾಪವಿದೆ.

**ಲಯೇ ಸಂಬೋಧಯೇಚ್ಚಿತ್ತಂ ವಿಕ್ಷಿಪ್ತಂ ಶಮಯೇತ್ ಪುನಃ ।**
**ಸಕಷಾಯಂ ವಿಜಾನೀಯಾತ್ ಸಮಪ್ರಾಪ್ತಂ ನ ಚಾಲಯೇತ್** ॥ (೩–೪೪)

**ಲಯ** ಎಂಬ ಶಬ್ದದ ಸರಿಯಾದ ಅರ್ಥ ಇದು: ಸಾಧಕ ಸಾಧನೆ ಮಾಡುತ್ತ ಮಾಡುತ್ತಾ ಇದ್ದ ಹಾಗೆ ದಿಢೀರನೆ ಆತನ ಧ್ಯೇಯವಸ್ತು ಮನಸ್ಸಿನಿಂದ ಮರೆಯಾಗಿ, ಎಚ್ಚರಸ್ಥಿತಿಯಲ್ಲಿದ್ದರೂ ಧ್ಯೇಯವಸ್ತು ಮನಸ್ಸಿನಲ್ಲಿರದು. ಇದನ್ನೇ 'ಲಯ' ವೆನ್ನುವುದು. ಆಗ ಸಾಧಕನು ಬಹು ಎಚ್ಚರಿಕೆಯಿಂದ ತನ್ನ ಧ್ಯೇಯವಸ್ತುವನ್ನು ಪುನಃ ತನ್ನ ಮನಸ್ಸಿನೊಳಗೆ ತರಲು ಪ್ರಯತ್ನಿಸಬೇಕು. ಇನ್ನು ನಮ್ಮಂತಹ ಸಾಮಾನ್ಯ ಜನರ ಅಭಿಪ್ರಾಯದಲ್ಲಿ 'ಲಯ'ವೆಂದರೆ ನಿದ್ದೆ. ಮನಸ್ಸು ನಿದ್ದೆ ಹೋಗುವಾಗ ಅದನ್ನು ಪ್ರಯತ್ನಪಟ್ಟು ಜಾಗೃದವಸ್ಥೆಯಲ್ಲಿರಿಸಬೇಕು.

ಇನ್ನು **ವಿಕ್ಷೇಪ.** ಇದು ಎಲ್ಲರಿಗೂ ತಿಳಿದ ವಿಷಯ. ಧ್ಯೇಯವಸ್ತುವನ್ನು ಬಿಟ್ಟು ಮನಸ್ಸು ಇತರ ವಿಷಯಗಳ ಬಗ್ಗೆ ಚಿಂತಿಸುವುದು. ಇಲ್ಲಿಯೂ ಅಷ್ಟೇ. ಪುನಃ ಪುನಃ ಮನಸ್ಸನ್ನು ಧ್ಯೇಯವಸ್ತುವಿನೊಂದಿಗೆ ಒಂದುಗೂಡಿಸಲು ಪ್ರಯತ್ನಿಸಬೇಕು. ಮುಂದಿನದು **ಕಷಾಯ** ಅಂದರೆ ಮನರಂಜನೆ. ಮನಸ್ಸು ವಿಷಯವಸ್ತುಗಳ ಜೊತೆ ರಮಿಸುತ್ತಿದ್ದರೆ ಆ ದಿಕ್ಕಿಗೇ ಅದು ಸೆಳೆಯಲ್ಪಡುತ್ತದೆ. ಮನಸ್ಸು ಯಾವಾಗ ವಿಷಯವಸ್ತುಗಳ ಆಕರ್ಷಣೆಗೆ ಬೀಳುವುದೋ ಆಗ ಅದು ಆ ವಿಚಾರದಲ್ಲಿ ಜಾಗೃತವಾಗಿರುತ್ತದೆ. ಅದನ್ನೇ **ಸಕಷಾಯಾಂ ವಿಜಾನೀಯಾತ್** ಎಂದು ಮೇಲಿನ ಶ್ಲೋಕದಲ್ಲಿ ಹೇಳಿರುವುದು.

ಇನ್ನೊಂದು ವಿಘ್ನದ ಪ್ರಸ್ತಾಪವೂ ಇದೆ. ಅದೆಂದರೆ **ರಸಾಸ್ವಾದನ.** ಸಾಧಕನು ಸಾಧನೆಯಲ್ಲಿ ಸ್ವಲ್ಪ ಮುಂದುವರಿದಾಗ ಅಲ್ಪಸ್ವಲ್ಪ ಆನಂದ ದೊರಕುತ್ತದೆ. ಆ ಆನಂದವನ್ನು ಆಸ್ವಾದಿಸುತ್ತ ಅಲ್ಲಿಂದ ಅವನು ಮುಂದುವರಿಯುವುದೇ ಇಲ್ಲ. ಆಗ "ಇದು ನನ್ನ ಗುರಿಯಲ್ಲ, ಇನ್ನೂ ಮುಂದುವರಿಯುವುದು ಬಹಳಷ್ಟಿದೆ" ಎಂದು ಮನಸ್ಸಿಗೆ ಗದರಿಸಿ ಮುಂದುವರಿಯಬೇಕು. ಸೌದೆ ಒಡೆಯುವವನಿಗೆ "ಇನ್ನೂ ಮುಂದುವರಿ" ಎಂದು ಹೇಳುವ ಸಂದರ್ಭ ಶ್ರೀರಾಮಕೃಷ್ಣರ ದೃಷ್ಟಾಂತ ಕಥೆಯಲ್ಲಿ ಬರುತ್ತದೆ. ಅದೇ ರೀತಿ ಇದೂ ಕೂಡ.

ಸಮಸ್ಥಿತಿ ಪ್ರಾಪ್ತವಾದರೆ ಮನಸ್ಸು ಇನ್ನು ವಿಚಲಿತವಾಗದು. ಮಾನಸಿಕ ಅವಸ್ಥೆ ಇಂತಹ ಮೇಲ್ಮಟ್ಟಕ್ಕೆ ಏರಿದ ಮೇಲೆ ಅದನ್ನು ಅಲ್ಲಿಯೇ ಸ್ಥಿರಗೊಳಿಸಲು ಪ್ರಯತ್ನಮಾಡಬೇಕು. ಇದು ಸಾಧ್ಯವಾಗಲಿಲ್ಲವೆಂದು ನಾವು ನಿರಾಸೆಗೊಳ್ಳುವುದಕ್ಕೆ ಕಾರಣವಿಲ್ಲ. ನಮ್ಮಿಂದಾದ ಯಾವ ಕಿಂಚಿತ್ ಪ್ರಯತ್ನವನ್ನು ಸತತವಾಗಿ ಮಾಡಿದ್ದೇವೋ, ಅದು ಎಂದಿಗೂ ನಿಷ್ಫಲವಾಗುವುದಿಲ್ಲ. ನಮ್ಮ ಖಾತೆಯಲ್ಲಿ ಅದು ಜಮಾ ಆಗಿರುತ್ತದೆ. ಕಿಂಚಿತ್ ಸ್ಮರಣೆ ಕೂಡ ಆಪತ್ಕಾಲದಲ್ಲಿ ನಮ್ಮ ಮನಸ್ಸಿಗೆ ಎಷ್ಟೋ ಬಲ ಮತ್ತು ದೃಢತೆಗಳನ್ನು ನೀಡುತ್ತದೆ. ಪ್ರಾರಂಭದಲ್ಲಿ ನಮ್ಮಲ್ಲಿದ್ದ ವೈರಾಗ್ಯ, ಸತತ ಪ್ರಯತ್ನ – ಇವುಗಳನ್ನು ಮುಂದೆಯೂ ಹೀಗೆ ಮೆಲುಕು ಹಾಕಬೇಕು: "ಆಹಾ! ಆಗ ನನ್ನ ಮನಸ್ಸಿನ ಅವಸ್ಥೆ ಹೇಗೆ ತಾನೇ ಇತ್ತು! ಅದೇನು ವೈರಾಗ್ಯ! ಏನು ಆಕರ್ಷಣೆ!" *

# ಪುಷ್ಪ ೧೦ –ಸ್ವಾಮಿ ಅದ್ವೈತಾನಂದ

ಶ್ರೀರಾಮಕೃಷ್ಣ ಶಿಷ್ಯೋದ್ಯಾನ

ಡಾ. ಕೆ. ಅನಂತರಾಮು



ಸ್ವಾಮಿ ಅದ್ವೈತಾನಂದರನ್ನು ಶ್ರೀರಾಮಕೃಷ್ಣ ಪರಮಹಂಸರ ಪುಷ್ಪವಾಟಿಕೆಯ ಬ್ರಹ್ಮಕಮಲಕ್ಕೆ ಹೋಲಿಸಬಹುದು. ಅದು ಆಗೊಮ್ಮೆ ಈಗೊಮ್ಮೆ ಅಪರೂಪಕ್ಕೆ ಅರಳುವ ಕುಸುಮ. ತಮ್ಮ ಐವತ್ತನೆಯ ವಯಸ್ಸಿನ ತರುವಾಯ ಅವರು ಪರಮಾರ್ಥಪಥವನ್ನು ಪ್ರವೇಶಿಸಿದರಾದರೂ ಅಲ್ಲಿಯೇ ವಿಕಸನಗೊಂಡು ಲೋಕಕ್ಕೆ ಬೀರಿದ ನರುಗಂಪು ಮಾತ್ರ ಅಪೂರ್ವವಾದುದು. ಶೈಶವದಲ್ಲಿ ತಾಯಿಯನ್ನು ಕಳೆದುಕೊಂಡು, ಕೌಮಾರ್ಯದಲ್ಲಿ ತಂದೆಯನ್ನು ಕಳೆದುಕೊಂಡು, ಮಧ್ಯವಯಸ್ಸಿನಲ್ಲಿ ಮಡದಿಯನ್ನು ಕಳೆದುಕೊಂಡು, ದುಃಖದ ಮೂಸೆಯಲ್ಲಿಯೇ ಕುದಿಕುದಿದು, ಕೊನೆಗೆ ಪರಮಹಂಸರ ಶಿಷ್ಯತ್ವದಿಂದ ಚೊಕ್ಕಚಿನ್ನವಾದವರೆಂದರೆ ಅದ್ವೈತಾನಂದರು. ಸಾಧಿಸುವ ಛಲವೊಂದಿದ್ದರೆ ಸಾಕು, ವಯೋಮಾನವು ಅಡ್ಡಿಯಾಗುವುದಿಲ್ಲವೆಂಬುವುದಕ್ಕೆ ಅವರೊಂದು ಆದರ್ಶವಾಗಿದ್ದಾರೆ. ಪರಮಹಂಸರಿಗಿಂತ ವಯಸ್ಸಿನಲ್ಲಿ ಎಂಟುವರ್ಷ ದೊಡ್ಡವರಾಗಿದ್ದು, ಪರಮಹಂಸರು ಮುಕ್ತರಾದ ಮೇಲೂ ಇಪ್ಪತ್ಮೂರು ವರ್ಷಗಳ ಕಾಲ ಜೀವಿಸಿದ್ದು, ರಾಮಕೃಷ್ಣಪಂಥವನ್ನು ತಮ್ಮ ಕರ್ಮಯೋಗದ ಬಲದಿಂದ ಕಟ್ಟಿಬೆಳೆಸಿದ ಕೀರ್ತಿ ಅದ್ವೈತಾನಂದರಿಗೆ ಸಲ್ಲುತ್ತದೆ.

**ಮಂತ್ರಮಯವಾದ ಮಾತುಗಳು:** ಸ್ವಾಮಿ ಅದ್ವೈತಾನಂದರು ಪಶ್ಚಿಮಬಂಗಾಳದ 'ಇಪ್ಪತ್ತನಾಲ್ಕು ಪರಗಣ' ಎಂಬ ಹೆಸರಿನ ಜಿಲ್ಲೆಗೆ ಸೇರಿದ ಜಗದ್ದಾಲ್ ಎಂದೂ ಕರೆಯಲಾಗುವ ರಾಜಪುರವೆಂಬ ಗ್ರಾಮದಲ್ಲಿ ೧೮೨೮ರಲ್ಲಿ ಜನಿಸಿದರು. ಗೋಪಾಲಚಂದ್ರ ಘೋಷ್ ಎಂಬುದು ಅವರ ಹುಟ್ಟುಹೆಸರಾಗಿತ್ತು. ಗೋವರ್ಧನಘೋಷ್ ಎಂಬುದು ಅವರ ತಂದೆಯ ಹೆಸರಾಗಿತ್ತು. ಇಷ್ಟು ಹೊರತು ಆ ಮಹಾತ್ಮರ ಜೀವನಚರಿತ್ರೆಯ ಹೆಚ್ಚಿನ ವಿವರಗಳೇನೂ ತಿಳಿದುಬಂದಿಲ್ಲ.

ಅದ್ವೈತಾನಂದರು ತಮ್ಮ ಜೀವನೋಪಾಯಕ್ಕಾಗಿ ಕೊಲ್ಕತ್ತೆಯ ಉಪನಗರಗಳಲ್ಲಿ ಒಂದಾದ ಸಿಂಥಿ ಎಂಬಲ್ಲಿ ಬೇನಿಪಾಲ್ ಎಂಬಾತನ ಅಂಗಡಿಯಲ್ಲಿ ಕೆಲಸಮಾಡುತ್ತಿದ್ದರು. ಗೃಹಸ್ಥರಾಗಿದ್ದ ಅವರು ತಮ್ಮ ಐವತ್ತೈದನೆಯ ವಯಸ್ಸಿನಲ್ಲಿ ಮಡದಿಯ ವಿಯೋಗದಿಂದ ಜೀವನದ ತಳಹದಿಯೇ ಕುಸಿಯಿತೆಂಬಷ್ಟು ದುಃಖಕ್ಕೆ ತುತ್ತಾದರು. ಅಂತಹ ವಿಷಮಪರಿಸ್ಥಿತಿಯಲ್ಲಿ ಅದ್ವೈತಾನಂದರನ್ನು ಪರಮಹಂಸರ ಭಕ್ತರಾಗಿದ್ದ ಮಹೇಂದ್ರಪಾಲ್ ಎಂಬುವವರು ಆ ಮಹಾತ್ಮರ ಸನ್ನಿಧಿಗೆ ಕರೆದೊಯ್ದರು. ಪರಮಹಂಸರು ತಮ್ಮ ಮಂತ್ರಮಯವಾದ ಮಾತುಗಳಿಂದ ದುಃಖಮೂಲವಾದ ಮನಸ್ಸಿನ ಕಗ್ಗಂಟುಗಳನ್ನೆಲ್ಲ ಬೇರುಸಮೇತ ಕಿತ್ತುಹಾಕಿದರು. ಜಗತ್ತನ್ನು ಗೆಲ್ಲಲು ವೈರಾಗ್ಯವೊಂದೇ ರಾಜಮಾರ್ಗ ಎಂಬುದನ್ನು ಆಗಲೇ ಅದ್ವೈತಾನಂದರು ಕಂಡುಕೊಂಡರು. ಪರಮಹಂಸರ ಶಿಷ್ಯರಾಗಿ ಆಗಿಂದಾಗಲೇ ಅವರ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡುಬಿಟ್ಟರು. ತಮಗಿಂತ ವಯಸ್ಸಿನಲ್ಲಿ ಹಿರಿಯರಾಗಿದ್ದುದರಿಂದ ಪರಮಹಂಸರು ಅವರನ್ನು 'ಹಿರಿಯಗೋಪಾಲ' ಎಂದು ಕರೆಯುತ್ತಿದ್ದರು. ದಾದಾ ಎಂದರೆ ಅಣ್ಣ ಎಂದರ್ಥ. ದಾ ಎಂಬುದು ಅದರ ಸಂಕ್ಷಿಪ್ತರೂಪ. ಗುರುಭಾಯಿಗಳೂ, ಮಿಕ್ಕವರೂ ಅವರನ್ನು ಗೌರವದಿಂದ ಗೋಪಾಲ್‌ದಾ ಎನ್ನುತ್ತಿದ್ದರು.

**ಸೇವಾಜೀವನ:** ಪರಮಹಂಸರ ಸೇವೆಯಲ್ಲಿ ತೊಡಗಿಸಿಕೊಳ್ಳುವುದರ ಮೂಲಕವೇ ಅದ್ವೈತಾನಂದರ ವಿರಕ್ತಜೀವನ ಪ್ರಾರಂಭವಾಯಿತು. ಅಂಗಡಿಯ ಕೆಲಸದಲ್ಲಿ ಪಳಗಿದ್ದ ಅವರು ತಮ್ಮ ಒಪ್ಪ ಓರಣದ ವ್ಯಕ್ತಿತ್ವದಿಂದಾಗಿ ಪರಮಹಂಸರ ಮೆಚ್ಚುಗೆಗೆ ಬಹುಬೇಗನೆ ಪಾತ್ರರಾಗಿಬಿಟ್ಟರು. "ನಮ್ಮ ಹಿರಿಯಗೋಪಾಲನು ತನ್ನ ಕಾರ್ಯಚಟುವಟಿಕೆಗಳಲ್ಲಿ ಎಷ್ಟೊಂದು ಶಿಸ್ತುಸಂಯಮಗಳನ್ನು ಸಾಧಿಸಿಕೊಂಡಿದ್ದಾನೆ, ನೋಡಿ! ಬಹಿರಂಗದಲ್ಲಿ ಸುಸಂಘಟಿತನಾದವನು ಅಂತರಂಗದಲ್ಲಿಯೂ ಸುಸಂಘಟಿತನಾಗಿರುತ್ತಾನೆ. ಏನು ಜಾಣತನ, ಏನು ಸನ್ನಡತೆ" ಎಂದು ಪರಮಹಂಸರೇ ಕೊಂಡಾಡುತ್ತಿದ್ದರು. ಅಂಗಡಿ ಮುಂಗಟ್ಟುಗಳಿಗೆ ಹೋಗಿಬರುವುದೇ ಮೊದಲಾದ ಸೇವಾಕಾರ್ಯಗಳಿಗಾಗಿ ಪರಮಹಂಸರೇ ಅದ್ವೈತಾನಂದರನ್ನು ಶ್ರೀಮಾತೆಯವರ ಸಹಾಯಕರಾಗಿಯೂ ನಿಯೋಜಿಸಿದರು. ವಯಸ್ಸಿನಿಂದ ಬಹಳ ಹಿರಿಯರಾಗಿ ಪರಿಪಕ್ವರಾಗಿದ್ದ ಅವರ ಮುಂದೆ ಶ್ರೀಮಾತೆಯವರು ತಮ್ಮ ಮುಖವನ್ನು ಸೆರಗಿನಿಂದ ಮುಚ್ಚಿಕೊಳ್ಳುತ್ತಿರಲಿಲ್ಲ. ಅಷ್ಟು ಮಾತ್ರವಲ್ಲದೆ ಅವರನ್ನು ತಮ್ಮ ಹಿರಿಯಣ್ಣನೆಂದೇ ಭಾವಿಸಿ ಯಾವುದೇ ಸಂಕೋಚವಿಲ್ಲದೆ ಮಾತುಕತೆಯಾಡುತ್ತಿದ್ದರು. ಈ ಬಗೆಯ ಸೇವಾಯೋಗದ ಮೂಲಕವೇ ಅದ್ವೈತಾನಂದರು ಪರಮಹಂಸರ ಉಪದೇಶಗಳನ್ನೂ ಅವರ ಜೀವನಶೈಲಿಯನ್ನೂ ಬೇಗಬೇಗನೆ ತಮ್ಮ ನಿತ್ಯಜೀವನಕ್ಕೆ ಅಳವಡಿಸಿಕೊಂಡುಬಿಟ್ಟರು.

**ನಿನ್ನೊಳಗಿನ ಚೈತನ್ಯವು ಜಾಗೃತವಾಗಲಿ:** ೧೮೮೫ರಲ್ಲಿ ಪರಮಹಂಸರು ಕ್ಯಾನ್ಸರ್‌ಕಾಯಿಲೆಯ ಉಪಚಾರಕ್ಕಾಗಿ ಕೊಲ್ಕತ್ತೆಯ ಶ್ಯಾಮಪುಕುರ್ ಎಂಬಲ್ಲಿ ಇರಬೇಕಾಗಿ ಬಂದಾಗ, ಅದ್ವೈತಾನಂದರೂ ಅವರೊಡನೆ ಇದ್ದುಕೊಂಡು ಕಾಲಕಾಲಕ್ಕೆ ಔಷಧಿಗಳನ್ನು ಕೊಡುವುದು, ಪಥ್ಯಪೂರಕವಾದ ಆಹಾರವನ್ನು ಕೊಡುವುದು ಮೊದಲಾದ ಸೇವಾಕಾರ್ಯಗಳನ್ನು ಅತ್ಯಂತ ಶ್ರದ್ಧಾಭಕ್ತಿಗಳಿಂದ ಮಾಡುತ್ತಿದ್ದರು. ಶ್ಯಾಮಪುಕುರದಿಂದ ಕಾಶೀಪುರದ ತೋಟದಮನೆಗೆ ಪರಮಹಂಸರು ಸ್ಥಳಾಂತರ ಗೊಂಡ ಬಳಿಕವೂ ಅದ್ವೈತಾನಂದರು ತಾವು ಮಾಡುತ್ತಿದ್ದ ಸದ್ಗುರುನಾಥನ ಸೇವೆಯನ್ನು ಮುಂದುವರಿಸಿದರು. ಬೇವಿನ ಎಲೆಯನ್ನು ಕುದಿಸಿದ ನೀರಿನಿಂದ ಕ್ಯಾನ್ಸರ್‌ಹುಣ್ಣನ್ನು ನಿತ್ಯವೂ ಎಚ್ಚರದಿಂದ ತೊಳೆಯುತ್ತಿದ್ದರು. ಪರಮಹಂಸರಿಗೆ ಊಟ ಬಡಿಸಿದ ತಟ್ಟೆ ಯನ್ನು ಉಸಿರು ಬಿಗಿಹಿಡಿದು ಅವರ ಮುಂದೆ ಇಡಬೇಕಾಗಿತ್ತು. ಪರಮಹಂಸರು ಅದನ್ನು ಮೊದಲು ಜಗನ್ಮಾತೆಗೆ ಅರ್ಪಿತವೆಂದು ಹೇಳಿ, ತರುವಾಯ ತಾವು ಸ್ವೀಕರಿಸುತ್ತಿದ್ದರು. ಬಡಿಸುವಾಗಲೂ ಬಹುಸೂಕ್ಷ್ಮವಾಗಿ ಉಸಿರಾಡ ಬೇಕಿತ್ತು. ಆದರೆ ಒಂದು ದಿನ ಅದ್ವೈತಾನಂದರ ಉಸಿರು ಅಕಸ್ಮಾತ್ ಬಡಿಸಿದ್ದ ಆಹಾರವಸ್ತುಗಳ ಮೇಲೂ ಬೀಸಿತು. ಆಗ ಪರಮಹಂಸರು ಅದನ್ನೊಲ್ಲದೆ ಪುನಃ ಬೇರೆಯಾಗಿಯೇ ಬಡಿಸಬೇಕೆಂದು ಸೂಚಿಸಿದರು. "ಈಗಿನ ನನ್ನ ಎಚ್ಚರ ಸಾಲದು, ಪ್ರತಿಯೊಂದು ಉಸಿರಿನಲ್ಲೂ ನಾನು ಎಚ್ಚರವಾಗಿರಬೇಕು" ಎಂಬ ಪಾಠವನ್ನು ಅದ್ವೈತಾನಂದರು ಆಗ ಕಲಿತರು.

ಸದ್ಗುರುವಿನಿಂದ ದೀಕ್ಷೆ ಪಡೆಯಬೇಕೆಂದು ಅದ್ವೈತಾನಂದರು ಒಳಗೊಳಗೇ ತಳಮಳಿಸುತ್ತಿದ್ದರು. ಪರಮಹಂಸರು ವಿಧಿವತ್ತಾದ ದೀಕ್ಷೆಯನ್ನೇನೂ ಕೊಡುತ್ತಿರಲಿಲ್ಲ. ನಾಲಗೆಯ ಮೇಲೆ ಬೀಜಾಕ್ಷರಗಳನ್ನು ಬರೆಯುವುದು, ಕಿವಿಯಲ್ಲಿ ಮಂತ್ರ ವನ್ನು ಹೇಳುವುದು, ತಲೆಯನ್ನೋ, ಎದೆಯನ್ನೋ ಮನಮುಟ್ಟಿ ಸ್ಪರ್ಶಮಾಡಿ ಶಕ್ತಿಪಾತವನ್ನುಂಟುಮಾಡುವುದು, ಕೇವಲ ಕಣ್ಣನೋಟದಿಂದಲೇ ಕೃಪಾಕಟಾಕ್ಷವನ್ನು ಬೀರುವುದು – ಇವೇ ಮುಂತಾದ ವಿಧಾನಗಳಿಂದಲೇ ಶಿಷ್ಯರನ್ನು ತಮ್ಮವರನ್ನಾಗಿ ಮಾಡಿಕೊಂಡುಬಿಡುತ್ತಿದ್ದರು. ತಮ್ಮ ಮನಸ್ಸು ಆನಂದಮಯವಾಗಿದ್ದ ಒಂದು ದಿನ ಪರಮಹಂಸರು ಅದ್ವೈತಾನಂದರನ್ನು ತಮ್ಮ ಸಮೀಪಕ್ಕೆ ಬರಮಾಡಿಕೊಂಡು, "ನಿನ್ನೊಳಗಿನ ಚೈತನ್ಯವು ಜಾಗೃತವಾಗಲಿ" ಎಂದು ಸಂಕಲ್ಪಿಸುತ್ತಾ, ತಮ್ಮ ದಿವ್ಯಸ್ಪರ್ಶದ ಮೂಲಕ ಅವರನ್ನು ಆಶೀರ್ವದಿಸಿದರು.

**ಕಾವಿಬಟ್ಟೆಗಳು, ರುದ್ರಾಕ್ಷಿಮಾಲೆಗಳು:** ಗಂಗಾನದಿಯು ಸಮುದ್ರವನ್ನು ಸೇರುವ ತಾಣವನ್ನು ಗಂಗಾಸಾಗರವೆಂದು ಕರೆಯು ತ್ತಾರೆ. ಪ್ರತಿವರ್ಷ ಸಂಕ್ರಾತಿ ಹಬ್ಬದಂದು ಪವಿತ್ರಸ್ನಾನಕ್ಕಾಗಿ ಸಾವಿರಾರು ಭಕ್ತರು ಅಲ್ಲಿಗೆ ಹೋಗುತ್ತಾರೆ. ಆ ಹೊತ್ತಿನಲ್ಲಿ ಮಾಡುವ ದಾನಧರ್ಮಗಳಿಗೆ ಹೆಚ್ಚಿನ ಮಹತ್ವವಿದೆ. ಅದ್ವೈತಾನಂದರು ತಮ್ಮಲ್ಲಿದ್ದ ಹಣದಿಂದ ಹನ್ನೆರಡು ಪಂಚೆಗಳನ್ನೂ ಹನ್ನೆರಡು ರುದ್ರಾಕ್ಷಿಮಾಲೆಗಳನ್ನೂ ಕೊಂಡುತಂದರು. ತಾವೇ ಆ ಪಂಚೆಗಳಿಗೆ ಬಣ್ಣಕೊಟ್ಟು ಕಾವಿವಸ್ತ್ರಗಳನ್ನಾಗಿಸಿದರು. ಸಂಕ್ರಾಂತಿಯಂದು ಕೊಲ್ಕತ್ತೆಯ ಜಗನ್ನಾಥಘಾಟಿನಿಂದ ಗಂಗಾಸಾಗರಕ್ಕೆ ಹೋಗುವ ಸಾಧುಸಂನ್ಯಾಸಿಗಳಿಗೆ ಅವುಗಳನ್ನು ದಾನಮಾಡುವ ಆಲೋಚನೆಯಲ್ಲಿದ್ದರು. ಅದನ್ನರಿತ ಪರಮಹಂಸರು, "ಯಾರನ್ನು ಹುಡುಕಿಕೊಂಡು ಹೋಗುತ್ತೀಯಪ್ಪಾ, ಸರ್ವಸ್ವವನ್ನೂ ತ್ಯಾಗಮಾಡಿಬಂದು ನನ್ನ ಮಕ್ಕಳಾಗಿರುವ ಈ ಯುವಸಂನ್ಯಾಸಿಗಳಿಗೇ ಕೊಟ್ಟುಬಿಡು. ಇವರಲ್ಲಿ ಒಬ್ಬೊಬ್ಬರೂ ಸಾವಿರ ಸಂನ್ಯಾಸಿಗಳಿಗೆ ಸಮನಾಗಿದ್ದಾರೆ. ಸಾವಿರಸಾವಿರಪಾಲು ಹೆಚ್ಚಿನ ಪುಣ್ಯ ನಿನಗೆ ಲಭಿಸುತ್ತದೆ" ಎಂದು ಸೂಚಿಸಿದರು. ೧೮೮೬ನೆಯ ಮಕರಸಂಕ್ರಾಂತಿಯಂದು ಪರಮಹಂಸರು ತಮ್ಮ ಅಮೃತಸ್ಪರ್ಶದಿಂದಲೂ ಮಂತ್ರೋಚ್ಚಾರಣೆಯಿಂದಲೂ ಆ ವಸ್ತುಗಳನ್ನೆಲ್ಲ ಪವಿತ್ರೀಕರಿಸಿ, ಕೈಯಾರೆ ಎಳೆಯ ಶಿಷ್ಯರಿಗೆಲ್ಲ ಹಂಚಿಬಿಟ್ಟರು. ಅದ್ವೈತಾನಂದರಿಗೂ ಆಗಲೇ ಒಂದು ಕಾವಿ, ಒಂದು ರುದ್ರಾಕ್ಷಿಮಾಲೆ ದಕ್ಕಿತು.

೧೮೮೬ರಲ್ಲಿ ಪರಮಹಂಸರು ಮಹಾಸಮಾಧಿಯನ್ನು ಪಡೆದುಕೊಂಡರು. ಅದಾದ ಕೆಲವು ವಾರಗಳಲ್ಲಿಯೇ ಪರಮಹಂಸರ ಸಿರಿವಂತ ಶಿಷ್ಯರಾದ ಸುರೇಂದ್ರಮಿತ್ರರ ನೆರವಿನಿಂದ ವರಾಹನಗರವೆಂಬಲ್ಲಿ ಮಠವೊಂದು ಸ್ಥಾಪನೆ ಗೊಂಡಿತು. ಆಗ ಅದ್ವೈತಾನಂದರು ಶಾಸ್ತ್ರೋಕ್ತವಾಗಿ ಸಂನ್ಯಾಸವನ್ನು ಸ್ವೀಕರಿಸಿ, ವಿವೇಕಾನಂದರಿಂದ ಆಶ್ರಮನಾಮವನ್ನು ಪಡೆದುಕೊಂಡರು. ತರುವಾಯದಲ್ಲಿ ಉತ್ತರಭಾರತದ ಮತ್ತು ದಕ್ಷಿಣಭಾರತದ ಅನೇಕ ಪವಿತ್ರಕ್ಷೇತ್ರಗಳನ್ನು ಸಂದರ್ಶಿಸಿ, ತಮ್ಮ ತಪಸ್ಸನ್ನು ಉಜ್ವಲಗೊಳಿಸಿಕೊಂಡರು. ತಮ್ಮ ಶೇಷಾಯುಷ್ಯವನ್ನೆಲ್ಲಾ ಕಾಶೀಪಟ್ಟಣದಲ್ಲಿಯೇ ಕಳೆಯಬೇಕೆಂಬುದು ಅವರ ಸಂಕಲ್ಪವಾಗಿತ್ತು. ಅದರಂತೆ ಐದುವರ್ಷಗಳ ಅಖಂಡ ತಪೋಮಯ ಜೀವನ ಅಲ್ಲಿ ನಿರ್ವಿಘ್ನವಾಗಿ ಸಾಗಿತು.

**ಬೇಲೂರುಮಠದ ಕರ್ಣಧಾರ:** ಸ್ವಾಮಿ ವಿವೇಕಾನಂದರು ೧೮೯೭ರಲ್ಲಿ ತಮ್ಮ ವಿದೇಶಪ್ರವಾಸದಿಂದ ಮರಳಿಬಂದು, ರಾಮಕೃಷ್ಣ ಮಿಷನ್ನನ್ನು ಸ್ಥಾಪಿಸಿದರು. ದೀನದಲಿತರ ಏಳಿಗೆಗಾಗಿ ರೂಪಿಸಲಾದ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಭಾರತದ ವಿವಿಧ ಭಾಗಗಳಿಂದ ವಿವೇಕಾನಂದರು ತಮ್ಮ ಗುರುಭಾಯಿಗಳನ್ನು ಬರಮಾಡಿಕೊಂಡರು. ಅದರಂತೆ ಅದ್ವೈತಾನಂದರು ವಾರಾಣಸಿಯನ್ನು ತೊರೆದು ಕೊಲ್ಕತ್ತೆಗೇ ಮರಳಿಬಂದರು. ಆಗತಾನೆ ಗಂಗಾತೀರದ ಬೇಲೂರುಗ್ರಾಮ ದಲ್ಲಿ ಹೊಸದಾಗಿ ಕೊಳ್ಳಲಾಗಿದ್ದ ಭೂಮಿಯಲ್ಲಿ ಕಟ್ಟಡಗಳನ್ನು ಎಬ್ಬಿಸುವ ಕಾರ್ಯ ಪ್ರಾರಂಭವಾಗಿತ್ತು. ತಗ್ಗುದಿಣ್ಣೆಗಳಿಂದ ತುಂಬಿದ ನೆಲವನ್ನು ಸಮತಟ್ಟು ಮಾಡುವಲ್ಲಿಂದ ಅದಕ್ಕೆ ನಾಂದಿಯಾಗಬೇಕಿತ್ತು. ಅವೆಲ್ಲದರ ಹೊಣೆಗಾರಿಕೆ ಸಂಪೂರ್ಣ ವಾಗಿ ಅದ್ವೈತಾನಂದರ ಹೆಗಲಿಗೇರಿತು. ಸಂತಾಲರೆಂದು ಕರೆಯುವ ಗಿರಿಜನ ಕೆಲಸಗಾರರನ್ನು ಕೂಡಿಸಿಕೊಂಡು, ಆ ಕೆಲಸಗಳನ್ನೆಲ್ಲ ಅದ್ವೈತಾನಂದರು ತಮ್ಮ ಪ್ರೇಮದ ಬಲದಿಂದ ಪರಮಾದ್ಭುತವಾಗಿ ಮಾಡಿ ತೋರಿಸಿದರು. ಕಟ್ಟಡಗಳೂ

ಮೇಲೆದ್ದವು. ಆ ಹೊತ್ತಿನಲ್ಲಿಯೇ ಅವರು ತರಕಾರಿ ತೋಟವೊಂದನ್ನು ಬೆಳೆಸಿ ಎಲ್ಲರಿಗೂ ಸಮೃದ್ಧವಾಗಿ ಕಾಯಿಪಲ್ಯಗಳು ದೊರೆಯುವಂತೆ ಮಾಡಿದರು. ಶ್ರೀಮಾತೆಯವರನ್ನು ಕಂಡಾಗ, "ಅಮ್ಮಾ, ನಿಮಗೂ ಬೇಕಾದಹಾಗೆ ತರಕಾರಿ ಕಳುಹಿಸಿ ಕೊಡುತ್ತೇನೆ" ಎಂದು ಅರಿಕೆಮಾಡಿಕೊಂಡರು. ಆ ಹೊತ್ತಿನಲ್ಲಿ ಶ್ರೀಮಾತೆಯವರು "ಮಗು, ನೀನು ವಯಸ್ಸಾದವನು, ಸಾಮಾನ್ಯವಾಗಿ ಮನೆವಾರ್ತೆಯ ಸಂಗತಿಗಳಿಗೆ ಅಷ್ಟಾಗಿ ಗಮನಕೊಡದಿರುವ ಈಗಿನ ಹುಡುಗರಂತಲ್ಲ ನಿನ್ನ ಜೀವನ. ಮಠ ವೆಂದರೆ ಅದೂ ಒಂದು ಕುಟುಂಬವೇ. ಊಟ, ಬಟ್ಟೆ, ವಸತಿ ಎಲ್ಲವೂ ಬೇಕು. ಆದ್ದರಿಂದ ಶ್ರಿರಾಮಕೃಷ್ಣರ ಮಕ್ಕಳ ಯೋಗಕ್ಷೇಮವನ್ನು ನೀನು ನೋಡಿಕೊಳ್ಳುವುದು ನನಗೆ ಸಂತೋಷವನ್ನುಂಟುಮಾಡಿದೆ" ಎಂದು ಮೆಚ್ಚುಗೆಯ ಮಾತುಗಳನ್ನು ನುಡಿದಿದ್ದರು.

**ಸಂತೋಷಂ ಜನಯೇತ್ ಪ್ರಾಜ್ಞಃ:** "ಜ್ಞಾನಿನಾದವನು ಸರ್ವರಿಗೂ ಸಂತೋಷವನ್ನು ಉಂಟುಮಾಡುತ್ತಾನೆ, ಹಾಗೆ ಮಾಡುವುದನ್ನು ಈಶ್ವರಪೂಜೆಯೆಂದು ತಿಳಿಯುತ್ತಾನೆ" ಎಂಬೊಂದು ಸೂಕ್ತಿಯಿದೆ. ಅದ್ವೈತಾನಂದರು ಆ ಮಾತಿಗೆ ತಕ್ಕಂತೆ ಬಾಳಿ ಬದುಕಿದರು. ಒಮ್ಮೆ ವಿವೇಕಾನಂದರು ಅವರನ್ನು ಗೇಲಿಮಾಡುವ ಪದ್ಯವೊಂದನ್ನು ಬರೆದು ಓದಿದರು. ಅದ್ವೈತಾನಂದರು ಅದರಿಂದ ಬೇಸರಗೊಳ್ಳದೆ, ಹಾಗೆ ಉಕ್ಕಿದ ನಗೆಯಲ್ಲಿ ತಾವೂ ತೇಲಿಹೋದರು.

ಇನ್ನೊಮ್ಮೆ ವಿವೇಕಾನಂದರು ತಮ್ಮ ವಿನೋದದ ವಿಸ್ತರಣೆಯ ಅಂಗವಾಗಿಯೇ ಅದ್ವೈತಾನಂದರನ್ನು ಕುರಿತು, "ದಾದಾ, ನೀವು ಮುದಿಗೂಳಿ ಇದ್ದಹಾಗೆ. ಕೊಂಬುಗಳನ್ನು ಕತ್ತರಿಸಿಕೊಂಡು ಎಳೆಗರುಗಳ ಜೊತೆಗೆ ಸೇರಿಕೊಂಡಿದ್ದೀರಿ. ಇನ್ನು ಮುಂದೆ ನೀವು ಹಾಲುಹಣ್ಣು ಚೆನ್ನಾಗಿ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಮೂಳೆಗಳು ತುಕ್ಕುಹಿಡಿದುಬಿಡುತ್ತವೆ" ಎಂದರು. ಅದಕ್ಕೆ ಅದ್ವೈತಾನಂದರು ಬೇಸರಪಡದೆ "ಹಾಗೆಯೇ ಆಗಲಪ್ಪಾ" ಎಂದರು. ಮರುದಿನವೇ ವಿವೇಕಾನಂದರು ಗುರುಭಾಯಿಗಳನ್ನೆಲ್ಲ ಕಟ್ಟಿಕೊಂಡು ಹತ್ತು ಸೇರು ಹಾಲು ಅವರ ತಲೆಯ ಮೇಲೆ ಸುರಿದರು, ಬಳಿಕ ಗಂಗಾಸ್ನಾನಮಾಡಿಸಿದರು, ಹೊಸಬಟ್ಟೆಗಳನ್ನು ಉಡಿಸಿದರು, ಪುಷ್ಟಿಕರವಾದ ಆಹಾರವನ್ನು ಬಡಿಸಿದರು. ಆಮೇಲೆ "ದಾದಾ, ನಮಗೆಲ್ಲ ನೀವೇ ಹಿರಿಯರು, ನೀವೇ ಮಹಾಂತರು, ಮಠದ ಜವಾಬ್ದಾರಿಯೆಲ್ಲ ನಿಮ್ಮದೇ" ಎಂದರು. ಆಗಲೂ ಅದ್ವೈತಾನಂದರು ಆನಂದದಿಂದಲೇ "ಹಾಗೆಯೇ ಆಗಲಪ್ಪಾ" ಎಂದು ಹೇಳಿದರು.

**ಅನುಕರಣೀಯ ವ್ಯಕ್ತಿತ್ವ:** ವಿವೇಕಾನಂದರ ವಿಷಯದಲ್ಲಿ ಅದ್ವೈತಾನಂದರಿಗೆ ಅಪಾರವಾದ ಪ್ರೀತಿಗೌರವಗಳಿದ್ದವು. "ನಮ್ಮ ಸಂಘದ ಸಂನ್ಯಾಸಿಗಳು ಸಂಸ್ಕೃತವನ್ನೂ ಶಾಸ್ತ್ರಗಳನ್ನೂ ತಿಳಿದಿರಬೇಕು. ಅದಕ್ಕಾಗಿ ನೀವು 'ಲಘುಸಿದ್ಧಾಂತ ಕೌಮುದಿ' ಎಂಬ ವ್ಯಾಕರಣಗ್ರಂಥವನ್ನು ಓದಬೇಕು, ದಾದಾ" ಎಂದು ವಿವೇಕಾನಂದರು ಹೇಳಿದಾಗ ಅದ್ವೈತಾನಂದರು "ಹಾಗೆಯೇ ಆಗಲಪ್ಪಾ" ಎನ್ನುತ್ತಾ ಅವರ ಆಜ್ಞೆಯನ್ನು ಪರಿಪಾಲಿಸಿದರು. ವಿವೇಕಾನಂದರು ಹಾಡಿದರೆ ತಾವು ತಬಲಾಸಾಥಿಯಾಗುತ್ತಿದ್ದರು.

ವಿವೇಕಾನಂದರು ಅದ್ವೈತಾನಂದರಿಗಿಂತ ಮೂವತ್ತೈದು ವರ್ಷ ಚಿಕ್ಕವರಾಗಿದ್ದರು. ಆದರೆ ವಿಧಿವಿಲಾಸದ ಮುಂದೆ ನಾವೆಷ್ಟರವರು! **"ಪುಷ್ಪವಿದ್ದಂತೆ ಮೊಗ್ಗೆಯನರ್ಪಿಸಿಕೊಂಡ ಶಿವನು, ಪಕ್ವವಾದ ಫಳವಿದ್ದಂತೆ ಕಸುಗಾಯ ಕೊಯ್ದನು ಶಿವನು"** ಎಂದು ಬಸವಣ್ಣನವರು ಒಂದೆಡೆ ಹಾಡಿರುವಂತೆ, ಪರಮಾತ್ಮನು ಬಹುಬೇಗ ವಿವೇಕಾನಂದರನ್ನು ತನ್ನೆಡೆಗೆ ಸೆಳೆದುಕೊಂಡು ಬಿಟ್ಟನು. ಅದ್ವೈತಾನಂದರಾದರೋ ಹೆಚ್ಚಿನ ಹೊಣೆಗಾರಿಕೆಯನ್ನು ಹೊರುತ್ತಾ ೧೯೦೧ರಲ್ಲಿ ರಾಮಕೃಷ್ಣಮಠ–ಮಿಷನ್ನುಗಳ ವಿಶ್ವಸ್ಥಮಂಡಳಿಯ ಸದಸ್ಯರಾದರು, ತರುವಾಯ ಅದರ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ತಮ್ಮ ಕಾರ್ಯತತ್ಪರತೆ, ಕಷ್ಟಸಹಿಷ್ಣುತೆ, ಪಾಂಕ್ತತೆ, ಏಕಾಗ್ರತೆ, ತಪೋನಿಷ್ಠೆ, ಸುಸಂಘಟಿತತೆ ಮುಂತಾದ ದೈವೀಗುಣಗಳಿಂದ ಯುವಸಂನ್ಯಾಸಿಗಳಿಗೆಲ್ಲಾ ತಾವೊಂದು ಮಾದರಿಯಾಗುವಂತೆ ತಮ್ಮ ವ್ಯಕ್ತಿತ್ವವನ್ನು ಪ್ರಕಾಶಪಡಿಸಿದರು.

**ಅನಾಯಾಸವಾದ ಮರಣ:** ತಮ್ಮ ಜೀವನದ ಕೊನೆಯದಿನಗಳಲ್ಲಿ ಅದ್ವೈತಾನಂದರು ಹೊಟ್ಟೆನೋವಿನಿಂದ ಬಳಲುತ್ತಿದ್ದರು. ಒಂದು ದಿನ ಅವರು ಶ್ರೀರಾಮಕೃಷ್ಣರ ಭಾವಚಿತ್ರದ ಮುಂದೆ ಕೈಮುಗಿದು ನಿಂತು "ಸದ್ಗುರುವೇ, ನನ್ನನ್ನು ಈ ಸಂಕಟದಿಂದ ಪಾರುಮಾಡು" ಎಂದು ಪ್ರಾರ್ಥಿಸಿದರು. ಆಗ ಶ್ರೀರಾಮಕೃಷ್ಣರು ತಮ್ಮ ಭುಜದ ಮೇಲೆ ಗದೆಯನ್ನು ಹೊತ್ತ ಭಂಗಿಯಲ್ಲಿ ಪ್ರತ್ಯಕ್ಷರಾದರು. ಆಗ ಅದ್ವೈತಾನಂದರು "ನೀನೇಕೆ ಗದೆಯನ್ನು ಹೊತ್ತಿದ್ದೀಯೆ, ಗುರುವೆ" ಎಂದು ಕೇಳಿದರು. ಆಗ ಪರಮಹಂಸರು "ನಾನು ಗದಾಧರನಲ್ಲವೇ, ಆದ್ದರಿಂದಲೇ ಗದೆಯನ್ನು ಹೊತ್ತಿದ್ದೇನೆ. ಈ ಯುಗದಲ್ಲಿ ನಾನು ಎಲ್ಲವನ್ನೂ ನಾಶಮಾಡಿ, ಅನಂತರ ಎಲ್ಲವನ್ನೂ ಹೊಸದಾಗಿ ಸೃಷ್ಟಿಸುತ್ತೇನೆ" ಎಂದು ಉತ್ತರಿಸಿದರು. ಸದ್ಗುರು ಕೃಪೆಯಿಂದ ಅದ್ವೈತಾನಂದರ ಹೊಟ್ಟೆನೋವು ಕೂಡ ನಾಶವಾಯಿತು.

೧೯೦೯ ಡಿಸೆಂಬರ್ ೨೮ನೆಯ ಮಂಗಳವಾರ ಬಂದಿತು. ಅದು ಅದ್ವೈತಾನಂದರ ಬದುಕಿನ ಕೊನೆಯ ದಿನವಾಗಿತ್ತು. ಆಗ ಅವರಿಗೆ ೮೧ ವರ್ಷ. ಅವರು ತಮ್ಮ ಕೊನೆಯ ಉಸಿರಿನವರೆಗೂ ಸ್ಫುಟವಾದ ಪ್ರಜ್ಞೆಯಲ್ಲಿಯೇ ಇದ್ದರು. ಪರಮಹಂಸರ ನಾಮವನ್ನು ಉಚ್ಚರಿಸುತ್ತಲೇ ಇದ್ದರು. ಸ್ವಲ್ಪ ನಿಂಬೆರಸವನ್ನೂ, ಹಾಲನ್ನೂ ಕುಡಿದರು. ಅವರ ಮುಖಮಂಡಲದ ಮೇಲೆ